# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 304

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಉತ್ತರಿಸುವ ದಿನಾಂಕ : 11.12.2024

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ 2 ವರ್ಷಗಳಿಂದ (2024 ನವೆಂಬರ್ 15 ರವರೆಗೆ) ರೈತರ ಜಮೀನು ಪಹಣಿ ಕಲಂ ನಂ.9 ಮತ್ತು 11 ರಲ್ಲಿ ವಕ್ಫ್ ಮಂಡಳಿ ಎಂದು ನಮೂದಿಸಿರುವ ಪ್ರಕರಣಗಳೆಷ್ಟು; ಈ ಪೈಕಿ ಎಷ್ಟು ಆಸ್ತಿಗಳನ್ನು ವಶಕ್ಕೆ ಪಡೆಯಲಾಗಿದೆ; ನೋಟಿಸ್ ನೀಡಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಕಳೆದ 2 ವರ್ಷಗಳಿಂದ ರೈತರ ಜಮೀನನ್ನು ಪಹಣಿ ಕಲಂ ನಂ. 9ರಲ್ಲಿ ವಕ್ಫ್ ಮಂಡಳಿ ಎಂದು ನಮೂದಿಸಿರುವ ಪ್ರಕರಣಗಳು ಯಾವುದೂ ಇರುವುದಿಲ್ಲ.<br><br>ಪಹಣಿ ಕಲಂ ನಂ.11 ರಲ್ಲಿ ಒಟ್ಟು 259 ಪ್ರಕರಣಗಳಲ್ಲಿ ವಕ್ಫ್ ಮಂಡಳಿ ಎಂದು ದಾಖಲಿಸಿದ್ದು, ದಾಖಲಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:
<table>
<tr><th rowspan="2">ಕ್ರ. ಸಂ.</th><th rowspan="2">ಜಿಲ್ಲೆಯ ಹೆಸರು</th><th colspan="2">ಪಹಣಿ ಕಾಲಂ ನಂ.9 ಮತ್ತು 11 ರಲ್ಲಿ ವಕ್ಫ್ ಮಂಡಳಿ ಎಂದು ನಮೂದಿಸಿರುವ ಪ್ರಕರಣ</th><th rowspan="2">ವಶಕ್ಕೆ ಪಡೆದ ಆಸ್ತಿಗಳು</th><th rowspan="2">ನೋಟೀಸ್ ನೀಡಿರುವ ಪ್ರಕರಣ</th></tr>
<tr><th>ಕಾಲಂ 9</th><th>ಕಾಲಂ 11</th></tr>
<tr><td>1.</td><td>ವಿಜಯಪುರ</td><td>-</td><td>42</td><td>-</td><td>120</td></tr>
<tr><td>2.</td><td>ಹಾವೇರಿ</td><td>-</td><td>207</td><td>-</td><td>-</td></tr>
<tr><td>3.</td><td>ಕಲಬುರಗಿ</td><td>-</td><td>-</td><td>-</td><td>194</td></tr>
<tr><td>4.</td><td>ಕೊಪ್ಪಳ</td><td>-</td><td>10</td><td>-</td><td>-</td></tr>
<tr><td>5.</td><td>ವಿಜಯನಗರ</td><td>-</td><td>-</td><td>-</td><td>14</td></tr>
<tr><td>6.</td><td>ಯಾದಗಿರಿ</td><td>-</td><td>-</td><td>-</td><td>119</td></tr>
</table>
</td></tr>
<tr><td>(ಆ)</td><td>ಏಕಾಏಕಿ ಪಹಣಿಗಳಲ್ಲಿ ವಕ್ಫ್ ಎಂದು ನಮೂದಾಗುತ್ತಿರುವುದರಿಂದ ಆಸ್ತಿಗಳ ಮಾಲೀಕರಿಗೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: MBW 20 (2) 1966, ದಿನಾಂಕ: 08.08.1966 ಹಾಗೂ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: RD 26 BHUDAA 2018, ದಿನಾಂಕ: 01.10.2018, ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: RD 25 BHUDAA 2018, ದಿನಾಂಕ: 29.09.2018, ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: RD 129 BHUDAA 2018, ದಿನಾಂಕ: 16.03.2020ರನ್ವಯ ವಕ್ಫ್ ಮಂಡಳಿ ಹೆಸರಿಗೆ ಹಕ್ಕು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
</table>

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಇ)</td><td>ನೋಟೀಸ್ ನೀಡುವುದನ್ನು ತಡೆ ಹಿಡಿಯಲಾಗಿದೆಯೇ: ಹಾಗಿದ್ದಲ್ಲಿ ಈಗಾಗಲೆ ನೀಡಿರುವ ನೋಟೀಸ್‌ಗಳನ್ನು ಸರ್ಕಾರ ಹಿಂದಕ್ಕೆ ಪಡೆದಿದೆಯೇ: ಎಷ್ಟು ನೋಟೀಸ್‌ಗಳನ್ನು ಹಿಂದಕ್ಕೆ ಪಡೆಯಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)</td><td>ಹೌದು.<br><br>ಸರ್ಕಾರದ ಪತ್ರ ಸಂಖ್ಯೆ:ಕಂಇ 99 ಟಿಆರ್‌ಎಂ 2024, ದಿನಾಂಕ: 09.11.2024ರಲ್ಲಿ ಈಗಾಗಲೇ ನೀಡಿರುವ ನೋಟಿಸ್‌ಗಳನ್ನು ಹಿಂದಕ್ಕೆ ಪಡೆಯುವ ಕುರಿತಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿರುತ್ತದೆ:<br><br>1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ಮಾಡಲು ಯಾವುದೇ ಕಛೇರಿ ಅಥವಾ ಯಾವುದೇ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ತಕ್ಷಣದಿಂದಲೇ ಹಿಂಪಡೆಯುವುದು ಹಾಗೂ ಮ್ಯುಟೇಷನ್ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸುವುದು;<br>2. ಈ ಕುರಿತು ನೀಡಲಾದ ಎಲ್ಲಾ ನೋಟೀಸುಗಳನ್ನು ಹಿಂಪಡೆಯುವುದು;<br>3. ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರುಗಳ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸತಕ್ಕದಲ್ಲ.<br><br>ಈಗಾಗಲೇ ನೀಡಿರುವ ನೋಟಿಸ್ ಗಳನ್ನು ಹಿಂದಕ್ಕೆ ಪಡೆಯಲಾದ ಜಿಲ್ಲಾವಾರು ವಿವರ ಈ ಕೆಳಕಂಡಂತಿವೆ:<br><br>
<table>
<tr><th>ಕ್ರ.<br>ಸಂ.</th><th>ಜಿಲ್ಲೆಯ ಹೆಸರು</th><th>ನೋಟಿಸ್ ಹಿಂದಕ್ಕೆ ಪಡೆಯಲಾದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ವಿಜಯನಗರ</td><td>14</td></tr>
<tr><td>2</td><td>ಕಲಬುರಗಿ</td><td>168</td></tr>
<tr><td>3</td><td>ಯಾದಗಿರಿ</td><td>30</td></tr>
<tr><td>4</td><td>ವಿಜಯಪುರ</td><td>120</td></tr>
</table>
</td></tr>
<tr><td>(ಈ)</td><td>ನೋಟೀಸ್ ನೀಡಿ ಅಕ್ರಮವಾಗಿ ಜಮೀನು/ ಆಸ್ತಿಗಳನ್ನು ವಕ್ಫ್ ಎಂದು ನಮೂದಿಸುವುದನ್ನು ತಪ್ಪಿಸಲು ಗೆಜೆಟ್ ಅಧಿಸೂಚನೆಯನ್ನೇ ರದ್ದು ಪಡಿಸುವ ಕುರಿತು ಸರ್ಕಾರ ಕ್ರಮಕೈಗೊಳ್ಳುವುದೇ; ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು?</td><td>ರಾಜ್ಯದಲ್ಲಿನ ವಕ್ಫ ಆಸ್ತಿಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ: ಕಂಇ 57 ಡಬ್ಲ್ಯೂಇಎಸ್ 97, ದಿನಾಂಕ: 18.08.1997 ರಲ್ಲಿ Whereas in respect of other properties in the State, the respective Deputy Commissioners and the Assistant Commissioners are appointed as Additional Survey Commissioners and Assistant Survey Commissioners of Waqf, respectively ಎಂಬುದರನ್ವಯ ಜಿಲ್ಲಾಧಿಕಾರಿಗಳು ದೃಢೀಕರಿಸಿರುವ ದಾಖಲೆಗಳ ಆಧಾರದ ಮೇಲೆ ರಾಜ್ಯಪತ್ರದಲ್ಲಿ ಪ್ರಕಟಿಸುವ/ರದ್ದುಪಡಿಸುವ ಕುರಿತು ಕ್ರಮವಹಿಸಲಾಗುತ್ತದೆ.</td></tr>
</table>

**ಸಂ:ಕಂಇ 237 ಟಿಆರ್‌ಎಂ 2024** (1601210)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು